**ಕರ್ನಾಟಕ ಸರ್ಕಾರ**

**ವಾಣಿಜ್ಯ ತೆರಿಗೆಗಳ ಇಲಾಖೆ**


**ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ) ರವರ ಕಛೇರಿ,**
**ವಿಭಾಗೀಯ ಮೌಲ್ಯವರ್ಧಿತ ತೆರಿಗೆ–3,**
**ಕೊಠಡಿ ಸಂಖ್ಯೆ: 803, 8ನೇ ಮಹಡಿ, ವಾಣಿಜ್ಯ ತೆರಿಗೆಗಳ ಕಾರ್ಯಾಲಯ–1,**
**ಗಾಂಧೀನಗರ, ಬೆಂಗಳೂರು–560 009**

**ದೂರವಾಣಿ: 080-22267825** **ಫ್ಯಾಕ್ಸ್ : 080-22356586**

ಕರ್ನಾಟಕ ಸರ್ಕಾರ
ವಾಣಿಜ್ಯ ತೆರಿಗೆಗಳ ಇಲಾಖೆ

**ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ) ರವರ ಕಛೇರಿ,**
**ವಿಭಾಗೀಯ ಮೌಲ್ಯವರ್ಧಿತ ತೆರಿಗೆ–3, ಕೊಠಡಿ ಸಂಖ್ಯೆ: 803, 8ನೇ ಮಹಡಿ,**
**ವಾಣಿಜ್ಯ ತೆರಿಗೆಗಳ ಕಾರ್ಯಾಲಯ–1, ಗಾಂಧೀನಗರ, ಬೆಂಗಳೂರು–560 009**
**ದೂರವಾಣಿ: 22267825**

ಸಂಖ್ಯೆ: ಶುಚಿತ್ವ/ಸಿ.ಆರ್.06/12–13 ದಿನಾಂಕ: 24.09.2012

## ಟೆಂಡರ್ ಪ್ರಕಟಣೆ (ಉಪಹಾರ ಕೇಂದ್ರ)

ಬಿ.ಎಂ.ಟಿ.ಸಿ. ಕಟ್ಟಡದ 2ನೇ ಮಹಡಿ, ಟಿ.ಟಿ.ಎಂ.ಸಿ. 'ಬಿ' ಬ್ಲಾಕ್, ಶಾಂತಿನಗರ, ಬೆಂಗಳೂರು, ಇಲ್ಲಿ ನೌಕರರ ಉಪಹಾರ ಮಂದಿರವನ್ನು 2 ವರ್ಷದ ಅವಧಿಗೆ ನಡೆಸಲು ಅರ್ಹ ಹೊಟೇಲು ಮಾಲೀಕರಿಂದ ಲಕೋಟೆ ಪದ್ಧತಿಯಲ್ಲಿ ಟೆಂಡರುಗಳನ್ನು ಆಹ್ವಾನಿಸಲಾಗಿದೆ. ನಿಗದಿತ ಟೆಂಡರ್ ಫಾರಂ ಮತ್ತು ನಿಬಂಧನೆಗಳನ್ನು ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು, ವಿಭಾಗೀಯ ಮೌಲ್ಯವರ್ಧಿತ ತೆರಿಗೆ–3, ಬೆಂಗಳೂರು ಇಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ ಅಥವಾ ಇಲಾಖೆಯ ಅಂತರ ಜಾಲ ತಾಣ (**website**) **http://ctax.kar.nic.in** ಇಲ್ಲಿ ಪಡೆಯಬಹುದಾಗಿದೆ.

ಈ ವಿಷಯಕ್ಕೆ ಸಂಬಂಧಪಟ್ಟ ಯಾವುದೇ ವಿವರಗಳು ನಿಬಂಧನೆಗಳು ಬೇಕಾದಲ್ಲಿ ಕಛೇರಿಯ ಕೆಲಸದ ವೇಳೆಯಾದ ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 5.30 ಗಂಟೆಯೊಳಗೆ ಕಛೇರಿಯನ್ನು ಸಂಪರ್ಕಿಸಬಹುದು. ಟೆಂಡರ್‌ದಾರರು ಟೆಂಡರ್‌ನಲ್ಲಿ ಸೂಚಿಸಿರುವ ನಿಬಂಧನೆಗಳನ್ನು ಪಾಲಿಸಬೇಕಾಗಿರುತ್ತದೆ. ಷರತ್ತುಗಳನ್ನು ವಿಧಿಸಿ ಸಲ್ಲಿಸಿದ ಟೆಂಡರ್‌ಗಳನ್ನು ಕಾರಣ ನೀಡದೇ ತಿರಸ್ಕರಿಸಲಾಗುವುದು,

ಟೆಂಡರ್‌ದಾರರು ಅರ್ಹತಾ ಬಿಡ್‌ನಲ್ಲಿ ತೋರಿಸಿರುವ ಅಂಶಗಳನ್ನು ಹಾಗೂ ಅದಕ್ಕೆ ಪೂರಕವಾಗಿ ಹೊಂದಿರುವ ಲೈಸನ್ಸ್‌ಗಳ ಜೆರಾಕ್ಸ್ ಪ್ರತಿಗಳನ್ನು ಲಗತ್ತಿಸಿ ಪ್ರತ್ಯೇಕವಾದ ಮೊಹರು ಮಾಡಿದ ಲಕೋಟೆಯಲ್ಲಿಟ್ಟು ಸಲ್ಲಿಸಬೇಕು. ಅದರ ಮೇಲೆ ಅರ್ಹತಾ ಬಿಡ್ ಎಂದು ಬರೆದು ಸಲ್ಲಿಸಬೇಕು.

ಅರ್ಹತಾ ಬಿಡ್ ಲಕೋಟೆಯ ಮೇಲೆ ಕ್ಯಾಂಟೀನ್ ನಡೆಸಲು ಟೆಂಡರು ಎಂದು ಬರೆದು ಮೊಹರು ಮಾಡಿದ ಲಕೋಟೆಯನ್ನು ದಿನಾಂಕ: 08.10.2012ರ ಸಂಜೆ 4.00 ಗಂಟೆಯೊಳಗೆ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಸಲ್ಲಿಸಬೇಕು. ನಂತರ ಬಂದ ಟೆಂಡರುಗಳನ್ನು ಪರಿಗಣಿಸಲಾಗುವುದಿಲ್ಲ. ಅರ್ಹತಾ ಬಿಡ್‌ಗಳನ್ನು ದಿನಾಂಕ: 10.10.2012 ರಂದು ಸಂಜೆ 4.00 ಗಂಟೆಗೆ ಹಾಜರಿರುವ ಟೆಂಡರುದಾರರ ಎದುರಿನಲ್ಲಿ ತೆರೆಯಲಾಗುವುದು.

## –: ಷರತ್ತುಗಳು :–

1. ಈ ಟೆಂಡರ್ ಬಗ್ಗೆ ರೂ. 20,000–00 ಇ.ಎಂ.ಡಿ.ಯನ್ನು ನಿಗದಿಪಡಿಸಿದ್ದು, ಈ ಮೊಬಲಗನ್ನು ಡಿಮ್ಯಾಂಡ್ ಡ್ರಾಫ್ಟ್ ರೂಪದಲ್ಲಿ ಟೆಂಡರ್ ಜೊತೆಯಲ್ಲಿ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ), ಡಿ.ವಿ.ಓ–3, ಬೆಂಗಳೂರು ಇವರ ಹೆಸರಿನಲ್ಲಿ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು,

2. ಯಾವ ಕಾರಣವನ್ನು ನೀಡದೆ ಅಥವಾ ಎಲ್ಲಾ ಟೆಂಡರುಗಳನ್ನು ಸ್ವೀಕರಿಸುವ ಮತ್ತು ತಿರಸ್ಕರಿಸುವ ಅಧಿಕಾರವನ್ನು ಕಾಯ್ದಿರಿಸಿಕೊಳ್ಳಲಾಗಿದೆ.

3. ಟೆಂಡರ್ ಪ್ರಕ್ರಿಯೆಯು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 2000 ರಲ್ಲಿನ ಮಾರ್ಗಸೂಚಿಗಳಿಗೆ ಒಳಪಟ್ಟಿರುತ್ತದೆ.

4. ಆಯ್ಕೆಯಾಗದ ಟೆಂಡರುದಾರರಿಗೆ ಅವರ ಇ.ಎಂ.ಡಿ. ಮೊಬಲಗನ್ನು ಟೆಂಡರ್ ಪ್ರಕ್ರಿಯೆ ಮುಗಿದ ನಂತರವೇ ಹಿಂದಿರುಗಿಸಲಾಗುವುದು.

5. ಯಶಸ್ವಿ ಬಿಡ್ಡುದಾರರು ಟೆಂಡರ್ ಪ್ರಕ್ರಿಯೆ ಮುಗಿದು ಈ ಕಛೇರಿಯಿಂದ ಅನುಮೋದನೆ ಪತ್ರವನ್ನು ನೀಡಿದ 7 ದಿನಗಳೊಳಗೆ ಠೇವಣಿ ಮೊತ್ತದೊಡನೆ ಗುತ್ತಿಗೆ ಕರಾರನ್ನು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಇ.ಎಂ.ಡಿ. ಮೊಬಲಗನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು
(ಆಡಳಿತ), ವಿ.ಮೌ.ತೆ.–3, ಬೆಂಗಳೂರು.

# –: ನಿಬಂಧನೆಗಳು :–

ವಿಷಯ: ಬೆಂಗಳೂರಿನ ಶಾಂತಿನಗರದ ಬಿ.ಎಂ.ಟಿ.ಸಿ. ಕಟ್ಟಡದ 2ನೇ ಮಹಡಿ,
ಟಿ.ಟಿ.ಎಂ.ಸಿ. 'ಬಿ' ಬ್ಲಾಕ್, ಇಲ್ಲಿ ಕ್ಯಾಂಟೀನ್ (ಉಪಹಾರ) ಗೃಹವನ್ನು
ನಡೆಸುವ ಟೆಂಡರ್ ಬಗ್ಗೆ.

* * *

1. ಗುತ್ತಿಗೆದಾರರು ಕ್ಯಾಂಟೀನ್ ಕಾರ್ಯ ಪ್ರಾರಂಭ ಮಾಡುವ ಮೊದಲು ಬೆಂಗಳೂರು ಮಹಾನಗರ ಪಾಲಕೆಯವರಿಂದ ಅಥವಾ ಯಾವುದೇ ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಪರವಾನಗಿಯನ್ನು (ಲೈಸೆನ್ಸ್) ಪ್ರಸ್ತುತಪಡಿಸಬೇಕು.
2. ಗುತ್ತಿಗೆದಾರರು ಕಾಲಕಾಲಕ್ಕೆ ತಾವು ಬಳಸಿದ/ಉಪಯೋಗಿಸಿದ ನೀರು ಹಾಗೂ ವಿದ್ಯುತ್ ಶುಲ್ಕಗಳನ್ನು ಪ್ರತಿ ಮಾಹೆಯಲ್ಲಿ ತಪ್ಪದೇ ಸಂಬಂಧಿಸಿದ ಇಲಾಖೆಗೆ ಪಾವತಿ ಮಾಡುವುದು.
3. ನಿಯೋಜಿಸಲ್ಪಟ್ಟ ಗುತ್ತಿಗೆದಾರರು ಕ್ಯಾಂಟೀನ್ ಕಟ್ಟಡವನ್ನು ವಶಕ್ಕೆ ತೆಗೆದುಕೊಳ್ಳುವ ಮುಂಚೆ ರೂ. 25,000–/ಗಳನ್ನು ಮುಂಡವಾಗಿ ಪಾವತಿ ಮಾಡಬೇಕು.
4. ನಿಯೋಜಿಸಲ್ಪಟ್ಟ ಗುತ್ತಿಗೆದಾರರು ಯಾವುದೇ ಕಾರಣಕ್ಕೂ ಕ್ಯಾಂಟೀನ್ ನಡೆಸಲು ನೀಡಿರುವ ಜಾಗವನ್ನು ಬೇರೆಯವರಿಗೆ ಮರು ಗುತ್ತಿಗೆ ನೀಡುವುದಾಗಲೀ ಅಥವಾ ಇನ್ಯಾವುದೇ ವ್ಯಕ್ತಿಯೊಡನೆ ಭಾಗಶಃವಾಗಲೀ ಅಥವಾ ಪೂರ್ಣವಾಗಲೀ ಒಳ ಒಪ್ಪಂದ ಮಾಡಿಕೊಳ್ಳುವುದನ್ನು ಅಥವಾ ಕ್ಯಾಂಟೀನ್ ನಡೆಸುವುದನ್ನು ನಿಷೇಧಿಸಲಾಗಿದೆ.
5. ಕಟ್ಟಡದ ಒಳಗೆ ಅಥವಾ ಹೊರಗೆ ಯಾವುದೇ ಮಾರ್ಪಡಿಸುವ ಕೆಲಸವನ್ನು ಲಿಖಿತ ಅನುಮೋದನೆ ಇಲ್ಲದೆ ನಿರ್ವಹಿಸಬಾರದು. ಕ್ಯಾಂಟೀನ್ ಹೊರ ಮತ್ತು ಒಳ ಆವರಣವನ್ನು ಸ್ವಚ್ಛ ಹಾಗೂ ಶುಚಿಯಾಗಿ ಇಟ್ಟಿಕೊಳ್ಳಬೇಕು. ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ), ಡಿ.ವಿ.ಓ–3, ಬೆಂಗಳೂರು ಇವರು ವಿಧಿಸಿದ ನಿಯಮಗಳಿಗೆ ಒಳಪಡಬೇಕು.
6. ದೂರು (ದೂರುವಹಿ) ಪುಸ್ತಕವನ್ನು ನಿರ್ವಹಿಸಬೇಕು ಹಾಗೂ ಎಲ್ಲರಿಗೂ ಕಾಣುವಂತೆ ಹಾಗೂ ಸಿಗುವಂತೆ ಆ ಕಟ್ಟಡದಲ್ಲಿ ಇಟ್ಟಿರಬೇಕು ಮತ್ತು ಗ್ರಾಹಕರು ಬಯಸಿದಾಗ ನೀಡಬೇಕು.
7. ಗುತ್ತಿಗೆದಾರರು ತಯಾರಿಸುವ ಪಾನೀಯ ಹಾಗೂ ತಿಂಡಿ ತಿನಿಸುಗಳು ಉತ್ತಮ ಗುಣಮಟ್ಟದಾಗಿರಬೇಕು. ತೂಕ ಅಳತೆಗಳು ನಿಗದಿ ಪಡಿಸಿದಂತೆ ಹೊಂದಾಣಿಕೆಯಾಗಬೇಕು.
8. ಯಾವುದೇ ಮುನ್ಸೂಚನೆ ಇಲ್ಲದೇ, ಯಾವುದೇ ವೇಳೆಯಲ್ಲಿ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ), ಡಿ.ವಿ.ಓ–3, ಬೆಂಗಳೂರು ಇವರಾಗಲೀ ಅಥವಾ ಇವರಿಂದ ನಾಮಾಂಕಿತಗೊಂಡ ಅಧಿಕಾರಿಗಳಾಗಲೀ ಕ್ಯಾಂಟೀನ್ ಕಟ್ಟಡವನ್ನು ಯಾವುದೇ ಸಮಯದಲ್ಲಿ ಪರಿವೀಕ್ಷಿಸುವ ಅಧಿಕಾರವನ್ನು ಹೊಂದಿರುತ್ತಾರೆ. ಅಂತಹ ಸಂದರ್ಭ ಬಂದಾಗ ಪರಿವೀಕ್ಷಕರಿಗೆ ಯಾವುದೇ ರೀತಿಯಲ್ಲಿ ತಡೆ ಒಡ್ಡುವಂತಿಲ್ಲ.
9. ಗುತ್ತಿಗೆ ಅವಧಿಯಲ್ಲಿ ಕಟ್ಟಡಕ್ಕೆ ಅಳವಡಿಸಿರುವ ನೀರು ಸರಬರಾಜು, ಒಳಚರಂಡಿ ಹಾಗೂ ವಿದ್ಯುತ್ ಫಿಟಿಂಗ್‌ಗಳನ್ನು ತೆಗೆದುಹಾಕುವಂತಿಲ್ಲ ಅಥವಾ ಹಾಳು ಮಾಡುವಂತಿಲ್ಲ. ಒಂದು ವೇಳೆ ಹಾನಿಗೊಳಿಸಿದಲ್ಲಿ ಹಾನಿಗೊಳಗಾದ ವಸ್ತುಗಳ ವೆಚ್ಚವನ್ನು ಗುತ್ತಿಗೆದಾರರು ನೀಡಿರುವ ಮುಂಗಡ ಹಣದಲ್ಲಿ ವಜಾ ಮಾಡಿಕೊಳ್ಳಲಾಗುವುದು ಹಾಗೂ ಈ ವೆಚ್ಚ ಮುಂಗಡ ಹಣಕ್ಕಿಂತ ಹೆಚ್ಚಿದ್ದರೆ, ಅದನ್ನು ಸಹ ವಸೂಲಿ ಮಾಡಲಾಗುವುದು.
10. ಗುತ್ತಿಗೆ ಅವಧಿ ಮುಗಿದ ಕೂಡಲೇ ಕಟ್ಟಡ ಹಾಗೂ ಆವರಣವನ್ನು ಸುಸ್ಥಿತಿಯಲ್ಲಿರುವಂತೆ ತೆರವು ಮಾಡತಕ್ಕದ್ದು. ಗುತ್ತಿಗೆ ಅವಧಿಯಲ್ಲಿದ್ದಾಗ ಇಲಾಖೆಗೆ ಕಟ್ಟಡದ ಅವಶ್ಯಕತೆ ಕಂಡುಬಂದಲ್ಲಿ ತೆರವುಗೊಳಿಸಲು ಸೂಚನೆ ನೀಡಲಾಗುವುದು. ಸೂಚನೆ ನೀಡಿದ 30 ದಿನಗಳೊಳಗೆ ತೆರವುಗೊಳಿಸಬೇಕು ಹಾಗೂ ಅಂತಹ ಸಂದರ್ಭಗಳಲ್ಲಿ ಗುತ್ತಿಗೆದಾರರು ಯಾವುದೇ ಪರಿಹಾರವನ್ನು ಕೇಳುವಂತಿಲ್ಲ.
11. ಉಪಹಾರ ಮಂದಿರ ಪ್ರಾರಂಭವಾಗಿ ಎರಡು ವರ್ಷದ ಅವಧಿಗೆ ಮಾತ್ರ ನಡೆಸಲು ಅನುಮತಿ ನೀಡಲಾಗುವುದು. ಇದನ್ನು ನಿಯಮಾನುಸಾರ ಮುಂದಿನ ವರ್ಷಕ್ಕೆ ಮುಂದುವರೆಸಬಹುದಾಗಿದೆ. ಆದರೆ ಗುತ್ತಿಗೆದಾರರು ಕ್ಯಾಂಟೀನ್ ಮುಂದುವರೆಸಲು ಕೋರಿ ಯಾವುದೇ ಹಕ್ಕನ್ನು ಮಂಡಿಸುವಂತಿಲ್ಲ.

12. ಯಾವುದೇ ಸಂದರ್ಭಗಳಲ್ಲೂ ಗುತ್ತಿಗೆದಾರರು ಈ ಮೇಲಿನ ನಿಬಂಧನೆಗೆ ಒಳಪಡದಿದ್ದಲ್ಲಿ ಅಥವಾ ಗುತ್ತಿಗೆ ಅವಧಿ ಮುಗಿದ ನಂತರವೂ ಕ್ಯಾಂಟೀನನ್ನು ತೆರವುಗೊಳಿಸದಿದ್ದರೆ, ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ), ಡಿವಿಓ–3, ಬೆಂಗಳೂರು/ನಾಮಾಂಕಿತಗೊಂಡ ಅಧಿಕಾರಿಯು ಯಾವುದೇ ಪತ್ರ ವ್ಯವಹಾರಗಳಿಗೆ ಆಸ್ಪದಕೊಡದೇ, ಅವಶ್ಯಕತೆಯಿದ್ದಲ್ಲಿ ಪೋಲೀಸ್ ಸೇವೆ ಬಳಸಿಕೊಂಡು ಗುತ್ತಿಗೆದಾರರನ್ನು ತೆರವುಗೊಳಿಸುವ ಅಧಿಕಾರ ಹೊಂದಿರುತ್ತಾರೆ.
13. ಗುತ್ತಿಗೆ ಅವಧಿ ಮುಗಿದ ನಂತರ ಇಲಾಖೆಗೆ ಗುತ್ತಿಗೆದಾರರಿಂದ ಯಾವುದೇ ಬಾಕಿ ಇಲ್ಲ ಎಂದು ಮನವರಿಕೆ ಮಾಡಿಕೊಂಡು ನಂತರ ಠೇವಣಿ ಹಣವನ್ನು ಬಡ್ಡಿ ರಹಿತವಾಗಿ ಹಿಂದಿರುಗಿಸಲಾಗುವುದು. ತಪ್ಪಿದ್ದಲ್ಲಿ ಠೇವಣಿ ಹಣವನ್ನು ಬಾಕಿ ಮೊಬಲಗಿಗೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.
14. ಮೇಲಿನ ನಿಬಂಧನೆಗೆ ಗುತ್ತಿಗೆದಾರರು ಬದ್ಧರಾಗದ ಸಂದರ್ಭಗಳಲ್ಲಿ ಭದ್ರತಾ ಠೇವಣಿ ಹಣವನ್ನು ಮುಟ್ಟುಗೋಲು ಮಾಡಿಕೊಳ್ಳಲಾಗುವುದು ಹಾಗೂ ಅದಕ್ಕೆ ಸಂಬಂಧಿಸಿದಂತೆ, ಯಾವುದೇ ವ್ಯವಹಾರವನ್ನು ಮುಂದುವರೆಸುವುದಿಲ್ಲ.
15. ಯಾವುದೇ ತಕರಾರುಗಳು ಉದ್ಭವಿಸಿದಲ್ಲಿ ಸರ್ಕಾರದ ತೀರ್ಮಾನವೇ ಅಂತಿಮವಾಗಿರುತ್ತದೆ ಹಾಗೂ ಅದಕ್ಕೆ ಬದ್ಧವಾಗಿರಬೇಕು.
16. ಯಾವುದೇ ಗುರುತರ ಕಾರಣ ನೀಡದೇ ಯಾವುದೇ ಸಂದರ್ಭದಲ್ಲೂ, ನಿಗದಿತ ಗುತ್ತಿಗೆ ಅವಧಿಗಿಂದ ಮುಂಚೆಯೇ ಪರವಾನಿಗೆಯನ್ನು ರದ್ದು ಮಾಡುವ ಅಧಿಕಾರವನ್ನು ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ), ಡಿ.ವಿ.ಓ–3, ಬೆಂಗಳೂರು ಇವರಲ್ಲಿ ಕಾಯ್ದಿರಿಸಲಾಗಿದೆ. ಮುಂದುವರಿದು, ರದ್ದುಗೊಂಡ ಅವಧಿಗೆ ಗುತ್ತಿಗೆದಾರರು ಯಾವುದೇ ಪರಿಹಾರವನ್ನು ಕೇಳಲು ಹಕ್ಕನ್ನು ಪಡೆದಿರುವುದಿಲ್ಲ.
17. ಕಛೇರಿ ಕೆಲಸದ ದಿವಸಗಳಲ್ಲಿ ಮಾತ್ರ ಬೆಳಿಗ್ಗೆ 8–00 ಗಂಟೆಯಿಂದ ರಾತ್ರಿ 8–00 ಗಂಟೆಯವರೆಗೆ ಉಪಹಾರ ಮಂದಿರವನ್ನು ತೆರೆದಿರಬೇಕು.
18. ಟೆಂಡರ್‌ದಾರರು ಟೆಂಡರ್ ನಿಬಂಧನೆಯೊಂದಿಗೆ ಲಗತ್ತಿಸಲಾದ ಅನುಬಂಧ–1 ರ ಅರ್ಹತಾ ಬಿಡ್‌ನಲ್ಲಿ ತಮ್ಮ ಸ್ವಂತ ಮಾಹಿತಿ ಮತ್ತು ಅನುಭವದ ವಿವರಗಳನ್ನು ತಪ್ಪದೆ ದಾಖಲಿಸುವುದು. ಬಿಡ್ ಸಲ್ಲಿಸದ ಅಪೂರ್ಣ ಟೆಂಡರ್‌ಗಳನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸಲಾಗುವುದು.

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು
(ಆಡಳಿತ), ವಿ.ಮೌ.ತೆ.–3, ಬೆಂಗಳೂರು.

ಗುತ್ತಿಗೆದಾರರ ಸಹಿ
ಮತ್ತು ವಿಳಾಸ

# –: ಅನುಬಂಧ–1 :–

## ಅರ್ಹತಾ ಬಿಡ್

| ಕ್ರ.ಸಂ. | ವಿವರ | |
|---|---|---|
| 1 | ಟೆಂಡರ್‌ದಾರರ ಹೆಸರು ಮತ್ತು ವಿಳಾಸ | |
| 2 | ಸ್ಥಿರ/ಮೊಬೈಲ್ ದೂರವಾಣಿ ಸಂಖ್ಯೆ | |
| 3 | ಆದಾಯ ತೆರಿಗೆ ಇಲಾಖೆಯಿಂದ ಪಡೆದ ಪ್ಯಾನ್ ಸಂಖ್ಯೆ | |
| 4 | ಹೋಟೆಲ್ ನಡೆಸಲು ಬೆಂಗಳೂರು ಮಹಾನಗರ ಪಾಲಿಕೆಯಿಂದ ಪರವಾನಿಗೆ ವಿವರ | |
| 5 | ವಾಣಿಜ್ಯ ತೆರಿಗೆ ಇಲಾಖೆಯಿಂದ ಪಡೆದ ನೊಂದಣಿ ಸಂಖ್ಯೆ ವಿವರ | |
| 6 | ಕಾರ್ಮಿಕ ಇಲಾಖೆಯ ಪರವಾನಿಗೆ ವಿವರ | |
| 7 | ಉಪಹಾರ ಗೃಹ ನಡೆಸಿ ಅನುಭವ ಹೊಂದಿರುವ ಬಗ್ಗೆ ವಿವರ | |
| 8 | ಪ್ರಸ್ತುತ ಯಾವ ಯಾವ ಸರ್ಕಾರಿ ಕಛೇರಿಗಳಲ್ಲಿ/ಸಾರ್ವಜನಿಕ ಸಂಸ್ಥೆಗಳಲ್ಲಿ ಕ್ಯಾಂಟೀನ್ ನಡೆಸುತ್ತಿದ್ದೀರಿ: ವಿವರಗಳು ಮತ್ತು ಅಂಥ ಸಂಸ್ಥೆಗಳಿಂದ ದೃಢೀಕೃತ ಪತ್ರ<br>(ಒಂದು ಅಥವಾ ಎರಡು ಸಂಸ್ಥೆಗಳಿಂದ ಪ್ರಮಾಣ ಪತ್ರ) | |
| 9 | ಹೆಚ್ಚುವರಿ ಅರ್ಹತೆಗಳು<br>(ಇದ್ದಲ್ಲಿ ನಮೂದಿಸಿ) | |

ಈ ಮೇಲೆ ತಿಳಿಸಿದ ವಿವರಗಳು ಸತ್ಯವಾಗಿರುತ್ತದೆ ಎಂದು ದೃಢೀಕರಿಸಿದೆ.

ಸ್ಥಳ: ಟೆಂಡರ್‌ದಾರರ ಸಹಿ
ದಿನಾಂಕ: ವಿಳಾಸ ಹಾಗೂ ಮೊಹರು